(ಸಾಕ್ಷಿಗೆ ದಿನಾಂಕ: 23.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ವೈಹೆಚ್.ಆರ್., 1(ಎ) ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ.ಎಸ್.ಸಿ ಪದವೀಧರನಾಗಿರುತ್ತೇನೆ. ನಾನು ವ್ಯವಸಾಯದೊಂದಿಗೆ ವ್ಯಾಪಾರ ಮಾಡುತ್ತೇನೆ. ಯಾವ ವ್ಯಾಪಾರ ಎಂದರೆ ರಿಯಲ್ ಎಸ್ಟೇಟ್ ಎಂದು ನುಡಿಯುತ್ತೇನೆ. 1 ರಿಂದ 3ನೇ ಪ್ರತಿವಾದಿಯರು ನನಗೆ ಹೇಗೆ ಪರಿಚಯ ಎಂದರೆ ನನ್ನ ಸ್ನೇಹಿತರ ಮೂಲಕ ಪರಿಚಯವಿರುತ್ತದೆ ಎಂದು ನುಡಿಯುತ್ತೇನೆ. ಸದರಿ ಸ್ನೇಹಿತನ ಹೆಸರು ಸೀತರಾಮು ಆಗಿರುತ್ತದೆ. ಪ್ರತಿವಾದಿಯರು ಹುಲಿಯೂರುದುರ್ಗದ ಟಿ.ಎಂ ರಸ್ತೆಯಲ್ಲಿ ವಾಸಿಸುತ್ತಾರೆ. ಪ್ರತಿವಾದಿಯರ ಮನೆಗೆ ಹೋಗಿ ನಾನು ಅವರನ್ನು ಭೇಟಿ ಮಾಡಿರುವುದಿಲ್ಲ. ಪ್ರತಿವಾದಿಯರಿಗೆ ಎಷ್ಟು ಸಹೋದರರು ಮತ್ತು ಸಹೋದರಿಯರು ಇರುತ್ತಾರೆ ಎಂದರೆ ಪ್ರತಿವಾದಿಯರನ್ನು ಹೊರತುಪಡಿಸಿ ಪ್ರತಿವಾದಿಯರಿಗೆ ಯಾವುದೇ ಸಹೋದರರು ಅಥವಾ ಸಹೋದರಿಯರು ಇರುವ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತೇನೆ. ಪ್ರತಿವಾದಿಯರಿಗೆ ನಾಲ್ಕು ಜನ ಸಹೋದರಿಯರು ಇರುತ್ತಾರೆ ಎಂದರೆ ನನಗೆ ಈ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತೇನೆ.

ನಾನು ಆಗಿರುತ್ತದೆ ಎಂದು ಹೇಳುವ ಒಪ್ಪಂದದ ಪೂರ್ವದಲ್ಲಿ ಪ್ರತಿವಾದಿಯರಿಗೆ ಎಷ್ಟು ಜನ ಸಹೋದರಿಯರು ಇರುತ್ತಾರೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ. 1ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ಮೃತ 1ನೇ ಪ್ರತಿವಾದಿಗೆ ಇಬ್ಬರು ಮಕ್ಕಳಿರುತ್ತಾರೆ. ಮೃತ 1ನೇ ಪ್ರತಿವಾದಿಯ ಮಗನ ಹೆಸರು ಪ್ರಭಾಕರ್ ರಾವ್ ಆಗಿರುತ್ತದೆ. ಮೃತ 1ನೇ ಪ್ರತಿವಾದಿಯ ಮಗಳ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿಯವರ ಮಗಳು ಎಲ್ಲಿ ವಾಸ ಮಾಡುತ್ತಾಳೆ ಎಂದು ನಾನು

ತಿಳಿದುಕೊಂಡಿರುವುದಿಲ್ಲ, ಸದರಿ ಮಗಳು ನಿ.ಪಿ.1 ಕರಾರಿಗೆ ಪಕ್ಷಗಾರಳಾಗಿರುವುದಿಲ್ಲ ಎಂದರೆ ಸರಿ.

ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ನಾನು ಸ್ವತ್ತಿಗೆ ಸಂಬಂಧಿಸಿದ ಪಹಣಿಗಳನ್ನು ಮಾತ್ರ ಪರಿಶೀಲಿಸಿರುತ್ತೇನೆ. ಸದರಿ ದಾಖಲೆಗಳನ್ನು 2ನೇ ಪ್ರತಿವಾದಿ ನನಗೆ ತೋರಿಸಿರುತ್ತಾರೆ. ನಿ.ಪಿ.1 ದಾಖಲೆಯಾಗುವ 3-4 ದಿನಗಳ ಪೂರ್ವದಲ್ಲಿ ನಾನು ಸದರಿ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಕ್ರಯದ ಸಂಬಂಧ ಮಾತುಕತೆಯಾಗಿದೆಯೇ ಎಂದರೆ ಪ್ರತಿವಾದಿಯರೇ ನೇರವಾಗಿ ನನ್ನನ್ನು ಈ ಸಂಬಂಧ ಸಂಪರ್ಕಿಸಿ ಮಾತನಾಡಿರುತ್ತಾರೆ ಎಂದು ನುಡಿಯುತ್ತೇನೆ. ಸದರಿ ಮಾತುಕತೆ ಹುಲಿಯೂರುದುರ್ಗದಲ್ಲಿ ಆಗಿರುತ್ತದೆ. ಸದರಿ ಮಾತುಕತೆ ನಿ.ಪಿ.1 ಕರಾರು ಆಗುವ 3-4 ದಿನಗಳ ಹಿಂದೆ ಆಗಿರುತ್ತದೆ. ಮಾತುಕತೆ ವೇಳೆಯಲ್ಲಿ ನಾನು, 1 ರಿಂದ 3ನೇ ಪ್ರತಿವಾದಿಯರು, ಸೀತರಾಮು ಮತ್ತು ನರಸಿಂಹಮೂರ್ತಿರವರು ಸ್ಥಳದಲ್ಲಿದ್ದರು. ಸದರಿ ಮಾತುಕತೆ ಹುಲಿಯೂರುದುರ್ಗದ ಉಪ ನೋಂದಣಾಧಿಕಾರಿಗಳ ಕಛೇರಿ ಬಳಿ ಆಗಿರುತ್ತದೆ. ಯಾವುದೇ ಮಾತುಕತೆ ಆಗದಿದ್ದರೂ ಸಹ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ಮತ್ತು 3ನೇ ಪ್ರತಿವಾದಿಯರ ಮಕ್ಕಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿ.ಪಿ.1 ಕರಾರಿಗೆ ಛಾಪ ಕಾಗದವನ್ನು 1 ಮತ್ತು 2ನೇ ಪ್ರತಿವಾದಿಯರು ತಂದಿರುತ್ತಾರೆ. ನಿ.ಪಿ.1 ಕರಾರನ್ನು ದಿನಾಂಕಃ 24.11.2008ರಂದು ತಯಾರಿಸಲಾಗಿರುತ್ತದೆ. ನಿ.ಪಿ.1 ದಾಖಲೆಯ ಛಾಪಾ ಕಾಗದವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಪ್ರತಿವಾದಿ 1(ಎ)ರವರು ದಾವಾ ಐಟಂ ನಂಬರ್ 1 ಮತ್ತು 2 ಸ್ವತ್ತುಗಳಲ್ಲಿ

ಭಾಗಾಂಶ ಕೇಳಿ ಕುಣಿಗಲ್ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 369/2016ರಂತೆ ದಾವೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ, ದಾವಾ ಸ್ವತ್ತುಗಳು ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿರುವುದಿಲ್ಲ, ಪ್ರತಿವಾದಿಯರ ವಾರಸುದಾರರ ಬಗ್ಗೆ ಮತ್ತು ದಾವಾ ಸ್ವತ್ತಿನ ಸ್ವರೂಪದ ಕುರಿತು ನಾನು ಊರಿನವರನ್ನು ವಿಚಾರಿಸಿರುವುದಿಲ್ಲ, ನಿ.ಪಿ.1 ದಾಖಲೆ ಸೃಷ್ಟಿತ ದಾಖಲೆಯಾದ ಕಾರಣ ಈ ಕುರಿತು ನಾನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿ 1(ಎ) ರವರಿಗೆ ದಾವಾ ಐಟಂ ನಂಬರ್ 1 ಮತ್ತು 2 ಸ್ವತ್ತುಗಳಲ್ಲಿ ಭಾಗಾಂಶವಿದ್ದು, ಸದರಿ ಭಾಗಾಂಶವನ್ನು ನೀಡಬಾರದು ಎಂಬ ಕಾರಣಕ್ಕಾಗಿ ಮೃತ 1ನೇ ಪ್ರತಿವಾದಿ ಮತ್ತು ಪ್ರತಿವಾದಿ 1(ಬಿ) ರವರ ಜೊತೆ ಶಾಮೀಲಾಗಿ ನಿ.ಪಿ.1 ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ, ಆ ಕಾರಣದಿಂದಲೇ ಪ್ರತಿವಾದಿ 1(ಎ)ರವರನ್ನು ನಿ.ಪಿ.1 ದಾಖಲೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿರುವುದಿಲ್ಲ ಹಾಗೂ ಸದರಿಯವರಿಗೆ ಯಾವುದೇ ತಿಳುವಳಿಕೆ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ,

***ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.